# ವರದ ವಿಷ್ಣುತೀರ್ಥ

ವರದ ವಿಷ್ಣುತೀರ್ಥ ಕರುಣದಿ ನೀ ಕೊಡು ಪುರುಷಾರ್ಥ ||ಪ||

ವರದ ಅಭೀಷ್ಟೆಯ ಕರೆದು ಎನಗೆ ನೀ |

ವರದನೆಂಬ ನಿನ್ನ ಬಿರುದು ಕಾಯಬೇಕು ||ಅ.ಪ|

ಅಜನ ಜನಕನಲ್ಲಿ ಇರುವಿಯೊ | ವಿಜನ ದೇಶದಲ್ಲಿ ಜನರು ಇದ್ದಲ್ಲಿ

ಬರುವಿಯೋ ಭಜನೆ ಮಾಡುವರಲ್ಲಿ

ಸುಜನರ ತಾಪಕೆ ವ್ಯಜನನು ನೀನು ಸುಜನಕಲ್ಪತರು ಕುಜನಕುಠಾರ ೧||

ನಂದನಂದನನು | ಅವ ನಿನ್ನ | ಬಂಧನದಲ್ಲಿಹನು |

ಅಂಧನಾಗಿ ನಾನು ಸಂಸ್ಕೃತಿ ಬಂಧನದೊಳಗಿಹೆನು |

ನೊಂದೆನು ಬಂದೆನು ಬೆಂದೆನು ನಿನ್ನಲ್ಲಿ | ಬಂಧನ ಬಿಡಿಸೋ ಬಂದಿಹೆ ಬಿಡದೆ ||೨||

ಮರೆತೆನು ನಾ ನಿನ್ನ | ಎನ್ನವಗುಣ ಮರೆತು ಪಾಲಿಸೆನ್ನ

ಪರತರ ಗುಣ ನಿನ್ನ ಹೊರತು ಅನ್ಯಗತಿ | ಗುರುತಕಿಲ್ಲೊ ಮುನ್ನಾ |

ಅರಿತು ಅನಂತಾದ್ರಿನಿಲಯನ ತೋರಿಸೋ ತ್ವರಿತ ಮೋದ ಪುರನಿರತ ಸದ್ಗುರುವೇ ||೩||